ಆ)

- ವೈವಿಧ್ಯಮಯವಾದ ಸಾಂಸ್ಕೃತಿಕ ಕಲಾ ಸಿರಿಯ ಅಭಿವೃದ್ಧಿಗಾಗಿ ಮಾತ್ರ ಸದರಿ ಕಲಾಗ್ರಾಮವನ್ನು ಬಳಸಲಾಗುತ್ತಿದೆ.

ಇ)

- ಕಲಾಗ್ರಾಮ ರುದ್ರಭೂಮಿಯಾಗಿ ಪರಿವರ್ತನೆಯಾಗಿಲ್ಲ,
- ಕಲಾಗ್ರಾಮದಲ್ಲಿ ರಾಷ್ಟ್ರ ಕವಿಗಳಾದ ಡಾ॥ ಜಿ.ಎಸ್. ಶಿವರುದ್ರಪ್ಪ ಹಾಗೂ ಜ್ಞಾನಪೀಠ ಪುರಸ್ಕೃತ ಸಾಹಿತಿ ಡಾ॥ ಯು.ಆರ್. ಅನಂತಮೂರ್ತಿಯವರ ಅಂತ್ಯ ಸಂಸ್ಕಾರವನ್ನು ಮಾತ್ರ ಮಾಡಲಾಗಿದೆ.

ಇ)

- ಉದ್ಭವಿಸುವುದಿಲ್ಲ.

ಈ)

- ಈ ಕಲಾಗ್ರಾಮದಲ್ಲಿ ಸಮಗ್ರ ಕನ್ನಡ ನಾಡಿನ ಕಲೆ ಸಂಸ್ಕೃತಿಯನ್ನು ಪ್ರತಿನಿಧಿಸುವ ಯೋಜನೆಗಳನ್ನು ರೂಪಿಸಿ ಸಾಂಸ್ಕೃತಿಕ ಚಟುವಟಿಕೆಯ ವಾತಾವರಣವನ್ನು ನಿರ್ಮಿಸುವುದು ಸರ್ಕಾರದ ಆಶಯವಾಗಿರುತ್ತದೆ.

ರಾಜ್ಯದಲ್ಲಿನ ತೆರೆದ ಕೊಳವೆ ಬಾವಿಗಳನ್ನು ಮುಚ್ಚುವುದು

1350(918); ಶ್ರೀ ಅಶೋಕ. ಆರ್ (ಪದ್ಮನಾಭ ನಗರ)

ಅ) ರಾಜ್ಯದಲ್ಲಿ ಇತ್ತೀಚೆಗೆ ಕೊಳವೆ ಬಾವಿಗಳನ್ನು ಕೊರೆಸಿ ಅವುಗಳನ್ನು ಮುಚ್ಚದೆ ಇರುವುದರಿಂದ, ಮಕ್ಕಳು ಆ ಕೊಳವೆ ಬಾವಿಗಳಲ್ಲಿ ಬಿದ್ದು, ಪ್ರಾಣ ಕಳೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ನಿಷ್ಕ್ರೀಯ ಕೊಳವೆ ಬಾವಿಗಳಲ್ಲಿ ಇತ್ತೀಚೆಗೆ ಹೆಚ್ಚಾಗಿ ಮಕ್ಕಳು ಬಿದ್ದು ಪ್ರಾಣ ಕಳೆದುಕೊಂಡಿದ್ದು, ಮಕ್ಕಳನ್ನು ಮೇಲೆತ್ತಲು ಸರ್ಕಾರ ಖರ್ಚು ಮಾಡಿರುವ ಹಣವೆಷ್ಟು;

ಇ) 2012 ರಿಂದ ಇಲ್ಲಿಯವರೆವಿಗೆ ಎಷ್ಟು ಮಕ್ಕಳು ಈ ಕೊಳವೆ ಬಾವಿಗಳಲ್ಲಿ ಬಿದ್ದು ಪ್ರಾಣ ಕಳೆದುಕೊಂಡಿರುತ್ತಾರೆ; ಅವರ ಪ್ರಾಣಕ್ಕೆ ಅಪಾಯವಾಗದಂತೆ ಮೇಲೆತ್ತಲು ಸರ್ಕಾರವು ಯಾವ ರೀತಿಯ ಕ್ರಮ ಕೈಗೊಂಡಿರುತ್ತದೆ; ಮುಂದೆ ಈ ರೀತಿ ನಿಷ್ಕ್ರೀಯ ಕೊಳವೆ ಬಾವಿಗಳನ್ನು ಮುಚ್ಚಲು ಕೈಗೊಂಡಿರುವ ಕಾನೂನು ಕ್ರಮವೇನು?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಬಂದಿದೆ.

ಆ) ಕೊಳವೆ ಬಾವಿಗಳಲ್ಲಿ ಬಿದ್ದ ಮಕ್ಕಳನ್ನು ಮೇಲೆತ್ತಲು ಸರ್ಕಾರದ ಖರ್ಚು ಮಾಡಿರುವ ಮೊತ್ತ ಕೆಳಕಂಡಂತಿದೆ.

(₹ ಗಳಲ್ಲಿ)

ಕ್ರ.ಸಂ.	ಜಿಲ್ಲೆ	ವೆಚ್ಚ ಮಾಡಲಾದ ಮೊತ್ತ
1.	ವಿಜಯಪುರ	6,11,654/–
2.	ಬಾಗಲಕೋಟೆ	41,23,872/–

ಇ) 2012ರಿಂದ ಇಲ್ಲಿಯವರೆಗೆ ವಿಜಯಪುರದಲ್ಲಿ ಒಬ್ಬರು, ಬಾಗಲಕೋಟೆಯಲ್ಲಿ ಒಬ್ಬರು ಸೇರಿ ಇಬ್ಬರು ಮಕ್ಕಳು ಪ್ರಾಣ ಕಳೆದುಕೊಂಡಿರುತ್ತಾರೆ.

ನಿಷ್ಕ್ರೀಯವಾಗಿರುವ ಕೊಳವೆ ಬಾವಿಗಳನ್ನು ಸುರಕ್ಷತೆ ಸಲುವಾಗಿ ಮುಚ್ಚಲು ಸರ್ಕಾರದಿಂದ ದಿನಾಂಕ:20.06.2014, 06.08.2014 ಮತ್ತು 17.10.2014ರಲ್ಲಿ ಸುತ್ತೋಲೆಗಳ ಮುಖೇನ ಸ್ಪಷ್ಟವಾದ ನಿರ್ದೇಶನ / ಮಾರ್ಗಸೂಚಿಗಳನ್ನು ನೀಡಲಾಗಿದೆ. ಸದರಿ ಸುತ್ತೋಲೆಯನ್ನು ಸಾರ್ವಜನಿಕ ಮಾಹಿತಿಗಾಗಿ RDPR ವೆಬ್ ಸೈಟ್ kar.nic.in/rdprನಲ್ಲಿ ಈಗಾಗಲೇ ಪ್ರತಿ ಬಿಂಬಿಸಲಾಗಿದೆ. ಇದರಲ್ಲಿ ಇನ್ನು ಮುಂದೆ ಕೊಳವೆ ಬಾವಿ ಕೊರೆಯಲು ಸ್ಥಳೀಯ ಗ್ರಾಮ ಪಂಚಾಯಿತಿಯಿಂದ ನಿರಾಕ್ಷೇಪಣಾ ಪತ್ರ ಮತ್ತು ಕೊರೆದಿರುವ ಬಾವಿ

ವಿಫಲವಾದಲ್ಲಿ ಅದನ್ನು ಸುರಕ್ಷಿತವಾಗಿ ಮುಚ್ಚಿಸುವ ಜವಾಬ್ದಾರಿಯನ್ನು ಖಾಸಗಿ ಹಾಗೂ ಸರ್ಕಾರಿ ಬಾವಿಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಲಾಗಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರತಿ ಮಾಹೆ ಈ ಸಂಬಂಧದ ಮಾಹಿತಿ ಇಂಧೀಕರಿಸಿ, ಪರಿವೀಕ್ಷಿಸಲು ಸಮಿತಿಯನ್ನು ಸಹ ರಚಿಸಲಾಗಿದೆ.

ಹೊಸ ಪ್ರಥಮ ದರ್ಜೆ ಕಾಲೇಜುಗಳ ಮಂಜೂರಾತಿ

1352(420); ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರ)

ಅ) 2015–16ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಎಷ್ಟು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆ;

ಆ) ಹಾಗಿದ್ದರೆ, ಎಷ್ಟು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಮಂಜೂರು ಮಾಡಲಾಗುವುದು?

ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) 150

ಆ) ಅನುದಾನದ ಲಭ್ಯತೆ, ಅಗತ್ಯತೆಗನುಗುಣವಾಗಿ ಹೊಸ ಕಾಲೇಜು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.